# ಹಲವು ವರ್ಷಗಳಿಂದ ಈ ಮೇಷ್ಟ್ರು ಒಂಟಿಯಾಗಿ ೧೦೫ ಮಕ್ಕಳಿರುವ ಶಾಲೆಯನ್ನು ನಿಭಾಯಿಸುತ್ತಿದ್ದಾರೆ!

**ಅಶೋಕ್**

ಕಿರಿಯ ಪ್ರಾಥಮಿಕ ಶಾಲೆ, ಹೆಮ್ಮಡಗಿ, ರುಕ್ಮಾಪುರ ಕ್ಲಸ್ಟರ್
ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ

ಅಶೋಕ್ ಯಾರಿಂದಲೂ ಕೀರ್ತಿಗಾಥೆ ಹಾಡಿಸಿಕೊಳ್ಳದ ನಿಜವಾದ ನಾಯಕ. ನೀವು ಅವರ ಶಾಲೆಯಲ್ಲಿ ಒಂದು ದಿನ ಕಳೆದರೆ, ಕರ್ನಾಟಕದ ಮೂಲೆಯೊಂದರಲ್ಲಿ ಈ ಸಭ್ಯ ಮನುಷ್ಯ ಏಕಾಂಗಿಯಾಗಿ ಮಾಡಿರುವ ಸಾಧನೆಗೆ ಮಾರು ಹೋಗುತ್ತೀರಿ. ಕರ್ನಾಟಕ ಶಿಕ್ಷಣ ಇಲಾಖೆಗೆ 2000ನೇ ಇಸವಿಯಲ್ಲಿ ಸೇರಿದಾಗ, ಅವರಿಗೆ ಕೇವಲ 20 ವರ್ಷ. ಅಂದಿನಿಂದಲೂ ಹೆಮ್ಮಡಗಿಯ ಕಿರಿಯ ಪ್ರಾಥಮಿಕ ಶಾಲೆಯಲ್ಲೇ ಸೇವೆ ಸಲ್ಲಿಸುತ್ತಿದ್ದಾರೆ. ಹೆಮ್ಮಡಗಿಯ ಜನಸಂಖ್ಯೆ ಒಂದು ಸಾವಿರಕ್ಕಿಂತ ಕಡಿಮೆ. ಗ್ರಾಮದಲ್ಲಿ ಕುರುಬ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಲಿಂಗಾಯತ ಸಮುದಾಯಗಳಿದ್ದು, ಹೆಚ್ಚಿನವರು ಬಡವರು ಹಾಗೂ ಕಷ್ಟಪಟ್ಟು ಜೀವನ ಸಾಗಿಸುವವರು. ಬಯಲು ಶೌಚ ಪದ್ಧತಿ ಈಗಲೂ ಇದ್ದು, ಶೌಚಾಲಯವಿರುವ ಮನೆ ಕಾಣಸಿಗುವುದು ಅಪರೂಪ. ಆದರೆ, ಅಶೋಕ್ ಶಾಲೆಗೆ ನೇಮಕಗೊಂಡ ಬಳಿಕ ಗ್ರಾಮಸ್ಥರು ಶಿಕ್ಷಣದ ಮೌಲ್ಯ ಅರಿತಿದ್ದಾರೆ; ಎಲ್ಲ ಮಕ್ಕಳೂ ಶಾಲೆಗೆ ಹೋಗುತ್ತಿದ್ದಾರೆ.

ಶಿಕ್ಷಕರಾಗಿ ಅಶೋಕ್ ಅವರದ್ದು ಸ್ವಯಂವಿಕಸನದ, ಸ್ವಯಂಕಲಿಕೆಯ ಹಾಗೂ ನಿರಂತರ ಪ್ರಗತಿಯ ಪಯಣ. ಪ್ರಾರಂಭಿಕ ವರ್ಷಗಳಲ್ಲಿ ಈ ಹೊರತಾಣ ಶಾಲೆಯಲ್ಲಿ ಒಂಟಿ ಶಿಕ್ಷಕನಾಗಿ ಕೆಲಸಮಾಡಿದ ಅವಧಿಯನ್ನು 'ಏಕಾಂತ ವಾಸ'ವೆಂದೂ ಪ್ರಯೋಗ ಮಾಡಿ ಪರೀಕ್ಷಿಸುವ ಕಾಲವೆಂದೂ ವರ್ಣಿಸುತ್ತಾರೆ. ಪಿಯುಸಿ ನಂತರ ಟಿಸಿಎಚ್ ಮಾಡಿದ್ದರೂ, ಅವರಿಗೆ ಶಿಕ್ಷಕನಾಗಿ ಪ್ರಾಯೋಗಿಕ ಅನುಭವ ಇರಲಿಲ್ಲ. ಸಾಂಪ್ರದಾಯಿಕ ಪದ್ಧತಿಯನ್ನು ಆಯ್ದುಕೊಂಡು, ಬೋಧನಾ ವಿಧಾನದೊಡನೆ ಕಸರತ್ತು ಮಾಡುತ್ತಿದ್ದ ಕಾಲ ಅದಾಗಿತ್ತು. ಮಕ್ಕಳು ಹೇಗೆ ಕಲಿಯುತ್ತವೆ ಎನ್ನುವುದು ಅವರಿಗೆ ತಿಳಿದಿರಲಿಲ್ಲ. 'ಸಿಎಫ್‌ಎಸ್‌ಐ'ನಲ್ಲಿ 2004ರಲ್ಲಿ ಮೊದಲ ಮೌಲ್ಯಯುತ ತರಬೇತಿಯನ್ನು ಅವರು ಪಡೆದರು. ಈ ಕಾರ್ಯಕ್ರಮದ ಅಂಗವಾಗಿ, ಶಿಕ್ಷಕರಿಗೆ ನಲಿ–ಕಲಿ ಬೋಧನೆಯಲ್ಲಿ ತರಬೇತಿ ನೀಡಲಾಯಿತು. ಅಶೋಕ್ ಇದನ್ನು ಅಪ್ಪಿ, ಜೀರ್ಣಿಸಿಕೊಂಡು ಅದರ ವಿಷಯ ಹಾಗೂ ಸಾರವನ್ನು ಕರಗತ ಮಾಡಿಕೊಂಡರು. ಎಷ್ಟು ಒಳ್ಳೆಯ ಶಿಕ್ಷಕನಾಗಲು ಸಾಧ್ಯವೋ ಅಷ್ಟು ಉತ್ತಮನಾಗಬೇಕೆಂಬ ಜ್ವಲಂತ ಹಂಬಲ ಹೊಂದಿದ್ದ ಅವರಿಗೆ ಬೋಧನೆಯ ತರಬೇತಿಯು ಇಂಬು ನೀಡಿತು. "ಈ ಮೊದಲು ಸಾಂಪ್ರದಾಯಿಕ

ವಿಧಾನದಿಂದಾಗಿ 20ರಲ್ಲಿ 10 ಮಕ್ಕಳು ಮಾತ್ರ ಕಲಿಯುತ್ತಿದ್ದರು. ನಲಿ–ಕಲಿಯಲ್ಲಿ ಕಲಿಕೆಗೆ ಹೆಚ್ಚು ಸಮಯ ಹಾಗೂ ಪ್ರಯತ್ನ ಬೇಕಾಗುವುದಾದರೂ ಎಲ್ಲಾ ಮಕ್ಕಳೂ ಕಲಿಯುತ್ತಾರೆ" ಅನ್ನುತ್ತಾರೆ ಅಶೋಕ್. ಅವರು ನಲಿ–ಕಲಿ ಮೇಲೆ ಸಂಪೂರ್ಣ ಹಿಡಿತ ಹೊಂದಿರುವುದರಿಂದ, ಈ ಬೋಧನ ವಿಧಾನದಲ್ಲಿ ತರಬೇತಿ ನೀಡುವ ಜಿಲ್ಲಾ ಸಂಪನ್ಮೂಲ ವ್ಯಕ್ತಿಯೂ ಆಗಿದ್ದಾರೆ.

ಹೆಮ್ಮಡಗಿಯ ಎಲ್‌ಪಿಎಸ್‌ಗೆ ಅವರು ಬಂದ ಬಳಿಕ ಒಂದೇ ಒಂದು ಮಗು ಶಾಲೆಯನ್ನು ತೊರೆದಿಲ್ಲ. ಪ್ರತಿಯೊಂದು ಮಗುವನ್ನು ಕುರಿತು ಅವರಿಗಿರುವ ಬದ್ಧತೆಗೆ ಇದು ಸಾಕ್ಷಿಯಾಗಿದೆ. ಶಾಲೆಯಿಂದ ತೇರ್ಗಡೆಯಾಗಿ ಹೋದ ಪ್ರತಿಯೊಂದು ಮಗುವೂ ಹಿರಿಯ ಪ್ರಾಥಮಿಕ ಶಾಲೆಗೆ ದಾಖಲಾಗುವಂತೆ ಅವರು ಖಾತ್ರಿಪಡಿಸಿಕೊಳ್ಳುತ್ತಾರೆ. ಮನೆಯಲ್ಲಿನ ಸಣ್ಣ ಮಕ್ಕಳ ಆರೈಕೆ, ಮನೆಗೆಲಸ ಹಾಗೂ ಗ್ರಾಮದಲ್ಲಿ ಅಂಗನವಾಡಿ ಇಲ್ಲದೆ ಇರುವುದು ಅವರ ಮಾರ್ಗದಲ್ಲಿನ ಅಡೆತಡೆಗಳಾದರೂ, ಅವನ್ನು ದಾಟುವ ಮೂಲಕ ಈ ಸಣ್ಣ ಹಳ್ಳಿಯು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಪ್ರಧಾನ ಗುರಿಯನ್ನು ಸಾಧಿಸಿದ್ದಾರೆ.

ಶಾಲೆಯಲ್ಲಿ 105 ಮಕ್ಕಳಿದ್ದು, ಎರಡು ಕೊಠಡಿಗಳು ರಸ್ತೆಯ ಎರಡು ಬದಿಗಳಲ್ಲಿವೆ. ಹೀಗಾಗಿ, ಐದು ತರಗತಿಗಳನ್ನು ನಿರ್ವಹಿಸಲು ಅಶೋಕ್ ಪ್ರತಿದಿನ ಹಲವು ಬಾರಿ ರಸ್ತೆಯನ್ನು ದಾಟಬೇಕಾಗುತ್ತದೆ. 17 ವರ್ಷಗಳ ಹಿಂದೆ ಅವರು ಇಲ್ಲಿಗೆ ಬಂದಾಗ, ದುರ್ಗಮ ಮೂಲೆಯೊಂದರಲ್ಲಿದ್ದ ಹೆಮ್ಮಡಗಿ ಎಂಬ ಸಣ್ಣ ಗ್ರಾಮಕ್ಕೆ ಬಸ್ ಸೌಕರ್ಯ ಇರಲಿಲ್ಲ. ಹೀಗಾಗಿ, ಅಶೋಕ್ ಪಕ್ಕದ ಸುಗೂರಿನಲ್ಲಿ ತಂಗುವ ವ್ಯವಸ್ಥೆ ಮಾಡಿಕೊಂಡರು. ಸುಗೂರಿನಲ್ಲಿ ಉಳಿದುಕೊಂಡಿದ್ದರಿಂದ ಪ್ರತಿದಿನ ಶಾಲೆಗೆ 8 ಗಂಟೆಗೆ ಬರಲು ಮತ್ತು ತಡವಾಗಿ ಹೋಗಲು ಸಾಧ್ಯವಾಗುತ್ತಿತ್ತು. ಇದರಿಂದ ಮಕ್ಕಳ ಜೊತೆಗೆ ಅಗತ್ಯ ಬಂಧವನ್ನು ಬೆಳೆಸಿಕೊಳ್ಳಲು ಅನುಕೂಲವಾಯಿತು. "ಹಳ್ಳಿಯಲ್ಲಿ ಉಳಿದುಕೊಂಡಿದ್ದರಿಂದ ಹಣ ಉಳಿಸಿದೆ. ನಗರದಲ್ಲಿ ವಾಸ್ತವ್ಯ ಹೂಡಿದ್ದರೆ, ಹೆಚ್ಚು ಹಣ ಖರ್ಚಾಗುತ್ತಿತ್ತು. ಮದುವೆಯ ನಂತರವೂ ನಾನು ಸುಗೂರಿನಲ್ಲೇ ಉಳಿದುಕೊಂಡೆ. ನನ್ನ ಮಗ ಕೂಡ ನನ್ನ ಶಾಲೆಯಲ್ಲೇ ವ್ಯಾಸಂಗ ಮಾಡುತ್ತಾನೆ." ಅಶೋಕ್ ನಗುತ್ತಲೇ ಹೇಳಿದರು.

ಒಂದು ವೇಳೆ ನೀವು ಈ ಶಾಲೆಗೆ ಭೇಟಿ ನೀಡಿದರೆ ಶಾಲೆ ಎಂಬ ಕುರುಹಿಗಾಗಿ ಒಂದು ಹಳೆಯ ಜರ್ಜರಿತವಾದ, ಬೇರಾವ ಮೂಲಸೌಲಭ್ಯಗಳೂ ಇಲ್ಲದ ಕಟ್ಟಡವನ್ನು ಕಾಣುತ್ತೀರಿ. ಆದರೆ ಅಲ್ಲಿ ಉತ್ಸಾಹದಿಂದ ಪುಟಿಯುವ, ಕುತೂಹಲಿಗಳಾದ, ಭಯವಿಲ್ಲದ ವಿಚಾರವಂತ ಮಕ್ಕಳನ್ನು ನೋಡುತ್ತೀರಿ. ಅಶೋಕ್ ಒಂದರಿಂದ ಮೂರನೇ ತರಗತಿ ಮಕ್ಕಳಿಗೆ (ಒಟ್ಟಿಗೇ ಕಲಿಸಲಾಗುತ್ತದೆ) ಪಾಠ ಹೇಳುವುದರಲ್ಲಿ ಮಗ್ನರಾಗಿದ್ದರೆ, ರಸ್ತೆಯನ್ನು ದಾಟಿ ನಾಲ್ಕು ಹಾಗೂ ಐದನೇ ತರಗತಿ ಬಳಿ ಬಂದರೆ, ಆ ಮಕ್ಕಳು ಸ್ವತಂತ್ರವಾಗಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಆ ಮಕ್ಕಳು ಅಶೋಕ್ ತಿಳಿಸಿಕೊಟ್ಟ ಪರಿಕಲ್ಪನೆಗಳ ಮೇಲೆ ಕಲಿಕೆ ಮುಂದುವರಿಸಿರುತ್ತಾರೆ. ನಾಲ್ವರು ಅಥವಾ ಐದು ಮಕ್ಕಳು ನೇತೃತ್ವ ವಹಿಸಿಕೊಂಡು, ಉಳಿದವರಿಗೆ ನೆರವಾಗುತ್ತಾರೆ. ಗಣಿತದಲ್ಲಿ ತಮ್ಮದೇ ಲೆಕ್ಕಗಳನ್ನು ಸೃಷ್ಟಿಸಿಕೊಂಡು, ತರಗತಿಯ ಎಲ್ಲರನ್ನೂ, ಅದನ್ನು ಗ್ರಹಿಸಲಾಗದೆ ಕಷ್ಟಪಡುತ್ತಿರುವ ಮಗುವನ್ನೂ ಸೇರಿಸಿಕೊಂಡು, ಉತ್ತರಗಳನ್ನು

ಕಂಡುಕೊಳ್ಳುತ್ತಾರೆ. ಬೇರೆ ಶಾಲೆಗಳ ಮಕ್ಕಳಿಗೆ ಹೋಲಿಸಿದರೆ, ಇವರ ಚುರುಕುತನ ಹಾಗೂ ಹರಿತವಾದ ಬುದ್ಧಿ ಅಸಾಮಾನ್ಯವಾದುದು. "ನನ್ನ ಅರ್ಧಾಂಶ ಕೆಲಸವನ್ನು ಈ ಮಕ್ಕಳು ಮಾಡುತ್ತಾರೆ. ಇಲ್ಲಿ 105 ಮಕ್ಕಳಿದ್ದು, ಮಕ್ಕಳ ಸಹಾಯವಿಲ್ಲದೆ ಎಲ್ಲ ತರಗತಿಗಳಿಗೂ ಬೋಧಿಸುವುದು ಮನುಷ್ಯ ಮಾತ್ರರಿಗೆ ಸಾಧ್ಯವಿಲ್ಲ. ಮಕ್ಕಳ ಸಚಿವ ಸಂಪುಟವೊಂದನ್ನು ರಚಿಸಿದ್ದು, ಇವರು ಪ್ರತಿದಿನ ಬೆಳಗ್ಗೆ ಶಾಲೆಯನ್ನು ತೆರೆಯುವುದು, ಸ್ವಚ್ಛಗೊಳಿಸುವುದು ಹಾಗೂ ಸಂಜೆ ವೇಳೆ ಶಾಲೆಯನ್ನು ಮುಚ್ಚುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಈ ವ್ಯವಸ್ಥೆ ಎಂಟು ವರ್ಷದಿಂದ ಯಾವುದೇ ಸಮಸ್ಯೆಯಿಲ್ಲದೆ ನಡೆಯುತ್ತಿದೆ: ಒಂದು ವೇಳೆ ನಾನು ಒಂದೆರಡು ನಿಮಿಷ ತಡವಾಗಿ ಬಂದರೂ, ಶಾಲೆ ಸರಿಯಾದ ಸಮಯಕ್ಕೆ ಆರಂಭವಾಗುವಂತೆ ಮಕ್ಕಳು ನೋಡಿಕೊಳ್ಳುತ್ತಾರೆ. ತಾವೇ ಮುಂದಾಗಿ ಬೆಳಗಿನ ಪ್ರಾರ್ಥನೆಯನ್ನು ಸಂಘಟಿಸಿ, ನಡೆಸುತ್ತಾರೆ." 'ಕೆಎಸ್‌ಕ್ಯುಎಎಸಿ' 2016ರ ಮೌಲ್ಯಮಾಪನದಲ್ಲಿ ಹೆಮ್ಮಡಗಿಯ ಎಲ್‌ಪಿಎಸ್, ಗಣಿತ ಹಾಗೂ ಇವಿಎಸ್‌ನಲ್ಲಿ ಉತ್ತಮ ಶಾಲೆಗಳಲ್ಲಿ ಒಂದು ಎಂದು ಮನ್ನಣೆ ಪಡೆಯಿತು. ಅಶೋಕ್ ಇದನ್ನು ಇನ್ನಷ್ಟು ಉತ್ತಮಗೊಳಿಸುವ ಗುರಿ ಇರಿಸಿಕೊಂಡಿದ್ದಾರೆ. "ಮುಂದಿನ ಸಲ ಭಾಷೆಯ ಮೌಲ್ಯ ಮಾಪನದಲ್ಲಿ ಶಾಲೆಯ ಸಾಧನೆ ಉತ್ತಮಗೊಳ್ಳಬೇಕು" ಎನ್ನುವುದಕ್ಕೆ ಗಮನವನ್ನು ಕೇಂದ್ರೀಕರಿಸಿದ್ದಾರೆ.

ಮಕ್ಕಳ ಜೊತೆಗಿನ ಅಶೋಕರ ಸ್ನೇಹ ಅತ್ಯಂತ ಆಪ್ತವಾದುದು. ಮನೆಗಳಲ್ಲಿ ಕಲಿಕೆಯ ವಾತಾವರಣ ಇಲ್ಲದೆ ಇರುವುದರಿಂದ, ಅವರು ಪ್ರತಿದಿನ ಸ್ವಲ್ಪ ಮನೆಕೆಲಸ ಕೊಡುತ್ತಾರೆ. ಪ್ರತಿಯೊಂದು ಮಗುವಿನ ಮನೆಪಾಠವನ್ನು ಪರಿಶೀಲಿಸಿ, ತಿದ್ದುತ್ತಾರೆ. ಸಾಯಂಕಾಲ ಮನೆಗೆ ಹೊರಡುವ ಮುನ್ನ ಎಲ್ಲ ಆಡಳಿತಾತ್ಮಕ ಪತ್ರ ವ್ಯವಹಾರ ಮುಗಿಸುತ್ತಾರೆ. ಅವರಿಂದ ಉಪಕೃತರಾದ ಮಕ್ಕಳು ಹಳೆಯ ವಿದ್ಯಾರ್ಥಿಗಳ ಸಂಘ ಮಾಡಿಕೊಂಡಿದ್ದು ಶಾಲೆಯ ಪ್ರಮುಖ ಆಗುಹೋಗುಗಳಲ್ಲಿ ಪಾಲ್ಗೊಳ್ಳುತ್ತಾರೆ. ಶಾಲೆಯಲ್ಲಿ ಗ್ರಂಥಾಲಯ ಸ್ಥಾಪಿಸಿದ್ದಾರೆ; ಅಶೋಕ್ ಹೊರಗೆ ಹೋಗಬೇಕಾದ ಅನಿವಾರ್ಯ ಸಂದರ್ಭದಲ್ಲಿ ತಾವೇ ಬಂದು ತರಗತಿಗಳನ್ನು ನಿರ್ವಹಿಸುತ್ತಾರೆ. ಸಮುದಾಯದ ಜೊತೆಗಿನ ತಮ್ಮ ಅತ್ಯುತ್ತಮ ಸಂಬಂಧವನ್ನು ಅಶೋಕ್ ಸರಳವಾಗಿ ಹೀಗೆ ವಿವರಿಸುತ್ತಾರೆ: "ಇದರಲ್ಲಿ ವಿಶೇಷವಾದುದು ಏನೂ ಇಲ್ಲ. ನಾನು ನನ್ನ ಕೆಲಸ ಮಾಡುತ್ತೇನೆ; ಅವರು ಅದನ್ನು ಗೌರವಿಸುತ್ತಾರೆ. ಎಸ್‌ಡಿಎಂಸಿ ಚುನಾವಣೆ ಹೊರತುಪಡಿಸಿ, ಸಮುದಾಯದ ವಿಷಯದಲ್ಲಿ ನಾನು ತಲೆ ಹಾಕುವುದಿಲ್ಲ. ಆ ಚುನಾವಣೆ ನ್ಯಾಯಬದ್ಧವಾಗಿ ನಡೆಯುವಂತೆ ನೋಡಿಕೊಳ್ಳುತ್ತೇನೆ."

ಈ ವಿಶಿಷ್ಟ ಕಥನದಲ್ಲಿನ ಬೇಸರದ ಭಾಗವೆಂದರೆ, ಅಶೋಕ್ ಅವರಿಗೆ ಹಲವು ವರ್ಷಗಳಿಂದ ಸಹೋದ್ಯೋಗಿ ದೊರೆಯದಿರುವುದು. ಇಲ್ಲಿಗೆ ನೇಮಕಗೊಂಡಿದ್ದ ಇನ್ನೊಬ್ಬ ಶಿಕ್ಷಕ ಬೇರೆ ಶಾಲೆಗೆ ನಿಯೋಜಿತಗೊಂಡರು. ಸಿಟ್ಟಿಗೆದ್ದ ಸಮುದಾಯದವರು ಶಾಲೆಗೆ ಬೀಗ ಹಾಕಿ ಪ್ರತಿಭಟಿಸಿ, ಟಿವಿ ಚಾನೆಲ್‌ಗಳು ಸೇರಿದಂತೆ, ಮಾಧ್ಯಮದವರ ಗಮನ ಸೆಳೆದರು. ಪ್ರತಿಭಟನೆ ಇಲಾಖೆಯ ಗಮನವನ್ನೂ ಸೆಳೆದು, ಇತ್ತೀಚೆಗೆ ಇನ್ನೊಬ್ಬರು ಶಿಕ್ಷಕರನ್ನು ನೇಮಿಸಲಾಗಿದೆ. ಏನೇ ಇರಲಿ, ಅಶೋಕ್ ಮಾತ್ರ ಎಂದಿನಂತೆ

ಅತ್ಯಾಸಕ್ತಿಯಿಂದ ತಮ್ಮ ಕೆಲಸ ಮುಂದುವರಿಸಿದ್ದು, ತಮ್ಮ ಕಲಿಕೆ ಹಾಗೂ ಅಭಿವೃದ್ಧಿಗೆ ಲಭ್ಯವಿರುವ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಟಿಎಲ್‌ಸಿ ಮನೆಯಿಂದ 18 ಕಿ.ಮೀ. ದೂರದಲ್ಲಿದ್ದರೂ, ಅಲ್ಲಿಗೆ ನಿಯತವಾಗಿ ಭೇಟಿ ನೀಡಿ, ಶಿಕ್ಷಕರೊಂದಿಗೆ ಕಲಿಕಾ ಸಾಧನಗಳ ಅಭಿವೃದ್ಧಿ ಹಾಗೂ ಬೋಧನೆಯನ್ನು ಕುರಿತು ಚರ್ಚಿಸುತ್ತಾರೆ. ನಲಿ–ಕಲಿಯಲ್ಲಿ ಪರಿಣತರಾದ್ದರಿಂದ, ಈ ವೇದಿಕೆಯಲ್ಲಿ ಅವರ ಕೊಡುಗೆಗಳಿಗೆ ಶ್ಲಾಘನೆ ವ್ಯಕ್ತವಾಗಿದೆ. ಕೆಲವು ವ್ಯಕ್ತಿಗಳು ತಮ್ಮ ಒಳ್ಳೆಯ ಗುಣಗಳಿಂದ ನಮ್ಮ ಮೇಲೆ ಅಚ್ಚಳಿಯದ ಛಾಪು ಮೂಡಿಸುತ್ತಾರೆ. ಅಶೋಕ್ ಅಂಥ ಅವಗೋಚರವಾದ ಆಕರ್ಷಣೀಯ ವ್ಯಕ್ತಿತ್ವ ಹೊಂದಿದ್ದಾರೆ.

---